ಪರಿಹಾರ ಸಿಕ್ಕಿದವರಿಗೆ ಸೀರುಂಡೆಯಂತೆ, ಕೈಲಾಗದವರಿಗೆ ಮೂರು ಕಾಸಂತೆ – ಅಂತೆಲ್ಲ ಅಂತೆ – ಕಂತೆಗಳ ಸಂತೆಯೇ ಎಲ್ಲರ ಚಿಂತೆಯಾಯಿತು. ಕೆಲವರಂತೂ ಸಂವಿಧಾನದ ಪ್ರಕಾರ ಇದು ನಮ್ಮ ಖಾಸಗಿ ಸೊತ್ತು. ಸರಕಾರ ಬೇಕಾಬಿಟ್ಟಿಯಾಗಿ ಇದನ್ನ ಹೇಗೆ ವಶಪಡಿಸಿಕೊಳ್ಳಲು ಸಾಧ್ಯ? ಕೋರ್ಟಿಗೆ ಅಪೀಲ್ ಮಾಡ್ತೇವೆ, ನೋಡೇಬಿಡುವಾ ಅಂತೆಲ್ಲ ಹಾರಾಡಿದರು. ಆಗ ಇನ್ನು ಕೆಲವರು ಈ ವಿಷಯದಲ್ಲಿ ನೀವು ಸುಪ್ರೀಮ್ ಕೋರ್ಟಿಗೆ ಹೋದರೂ ಅಷ್ಟೆ, ಏನೂ ಪ್ರಯೋಜನವಿಲ್ಲ. ರಸ್ತೆ ಅಭಿವೃದ್ಧಿ ಪ್ರಾಧಿಕಾರದ ವಿಷಯದಲ್ಲಿ ಯಾವ ಕೋರ್ಟೂ ಕೇಸನ್ನು ಕೈಗೆತ್ತಿಕೊಳ್ಳುವುದಿಲ್ಲ, ನೋಡ್ತಾ ಇರಿ ಅಂತೆಲ್ಲ ಹೇಳಿ ತಮಗಿದ್ದ ಅಷ್ಟಿಷ್ಟು ಕಾಯದೆ ಜ್ಞಾನವನ್ನು ಪ್ರದರ್ಶಿಸಿ ಬೀಗಿದರು.

ಮಾಳೂರಿನ ಶೇಷಾಚಾರ್ಯರು ಊರಿನ ಈಶ್ವರದೇವಸ್ಥಾನದ ಅರ್ಚಕರು. ಅವರೇನು ಶ್ರೀಮಠಕ್ಕೆ ಹೋಗಿ ಆರೆಂಟು ವರ್ಷ ಶಾಸ್ತ್ರೋಕ್ತವಾಗಿ ವೇದಾಧ್ಯಯನ ಮಾಡಿದವರಲ್ಲ. ಆದರೆ ಅಲ್ಲಲ್ಲಿ ಅಷ್ಟಿಷ್ಟು ಕಲಿತು ಸಂಪ್ರದಾಯಕ್ಕೆ ರವಷ್ಟೂ ಚ್ಯುತಿಬರದಂತೆ ಸಂದರ್ಭಕ್ಕನುಗುಣವಾಗಿ ಕೈಕರಣ, ಮಂತ್ರೋಚ್ಚಾರಣೆಯಲ್ಲಿ ಎತ್ತಿದ ಕೈ. ಅದರಲ್ಲಿಯೂ ಶ್ರೀಮಂತ ಭಕ್ತರು ದೇವಸ್ಥಾನಕ್ಕೆ ಬಂದಾಗ ಅವರ ಸಂಭ್ರಮ ಸಡಗರ, ವಿನಯ ದೇವರಲ್ಲಿಯ ನಿಸ್ಸೀಮ ಭಕ್ತಿ ತಾನೇತಾನಾಗಿ ವಿಜೃಂಭಿಸುತ್ತಿದ್ದವು. ಹಾಗಾಗಿ ಧನಿಕರೆಲ್ಲ ಅವರ ಕಾರ್ಯಾಚರಣೆಗೆ ಮಾರುಹೋಗಿ ಧಾರಾಳವಾಗಿ ದಕ್ಷಿಣೆಯನ್ನು ನೀಡುತ್ತಿದ್ದರು. ಇಂತಿರ್ಪ ಶೇಷಾಚಾರ್ಯರ ಮನೆ ಹಿರಿಯಣ್ಣನ ಮನೆ ಪಕ್ಕದಲ್ಲೇ ಇತ್ತು. ಆದರೆ ಅದು ಹತ್ತಾರು ಮಾರು ದೂರ ದಿಬ್ಬದ ಮೇಲಿರುವುದರಿಂದ ಹೈವೇಗೆ ಅವರ ಮನೆ ಬಲಿಯಾಗುವ ಅವಕಾಶವಿರಲಿಲ್ಲ. ಆಚಾರ್ಯರ ಲೆಕ್ಕದಲ್ಲಿ ಅದೇ ಅವರಿಗೆ ಮುಳುವಾಗಿತ್ತು. ಈಗಲೋ ಆಗಲೋ ಹರಿದು ಬೀಳುವ ಸೋಗೆಮನೆ ರಸ್ತೆಗಾಹುತಿಯಾದರೆ ಸರಕಾರದಿಂದ ಬರುವ ಪರಿಹಾರಧನದಲ್ಲಿ ದಿವಿನಾದ ಹೊಸಮನೆಯೊಂದನ್ನು ಕಟ್ಟಿಸಬಹುದಾಗಿತ್ತು ಎನ್ನುವ ಅವರ ದೂರಾಲೋಚನೆ ಕಾರ್ಯಗತವಾಗುವ ಯಾವ ಲಕ್ಷಣಗಳೂ ಗೋಚರಿಸುತ್ತಿರಲಿಲ್ಲ. ಹಾಗಾಗಿ ಮನೆ ಕಳೆದುಕೊಳ್ಳುವ ಹಿರಿಯಣ್ಣ ಸರಕಾರಿ ಧನಸಹಾಯದಿಂದಾಗಿ ತನಗಿಂತ ಶ್ರೀಮಂತನಾಗುತ್ತಾನಲ್ಲ ಎನ್ನುವ ಹೊಟ್ಟೆಯುರಿ ಅವರನ್ನು ಅಹರ್ನಿಶಿ ಕಾಡತೊಡಗಿತ್ತು.

ಹೀಗೆ ಜನರು ಅವರವರ ಲೆಕ್ಕಾಚಾರದಲ್ಲಿಯೇ ಮುಳುಗೇಳುತ್ತಿರುವಾಗ ಒಂದು ದಿನ ಬೆಳ್ಳಂಬೆಳಗ್ಗೆ ಸರ್ವೆ ಮಾಡುವ ಐದಾರು ಮಂದಿ ಟೆಲೆಸ್ಕೋಪ್‌ನೊಂದಿಗೆ ಮಾಳೂರಿಗೆ ಬಂದಿಳಿದರು. ಕೆಲವರು ಟೇಪ್ ಹಿಡಿದು ಸ್ಥಳವನ್ನು ಅಳೆದು ಲೆಕ್ಕಾಚಾರ ಮಾಡಿದರೆ, ಇನ್ನು ಕೆಲವರು ರಸ್ತೆಗಡಿಯನ್ನು ಗುರುತು ಮಾಡಲು ಹಳದಿ ಬಣ್ಣ ಬಳಿದ ಬಾಂದ್‌ಕಲ್ಲನ್ನು ಅಲ್ಲಲ್ಲಿ ನೆಡುತ್ತ ಹೋದರು. ಹಿರಿಯಣ್ಣನ ಸುಮಾರು ಮುಕ್ಕಾಲು ಎಕರೆ ತೋಟ ರಸ್ತೆಗೆ ಬಲಿಯಾಗುವುದಿತ್ತು. ಜೊತೆಗೆ ಅವನ ದೊಡ್ಡದಾದ ಹಳೆಕಾಲದ ಹದಿನಾರು ಅಂಕಣದ ಮನೆಯೂ ಹೋಗುವುದು ನಿಶ್ಚಿತವಾಗಿತ್ತು. 'ಅಣ್ಣ, ನಿಮ್ಮ ಮನೆ ಸಾಕಷ್ಟು ದೊಡ್ಡದುಂಟು ಮಾರಾಯ್ರೆ, ಜಾಸ್ತಿ ಹಣ ಸಿಗಬಹುದು. ನೀವು ಮಂಡೆಬಿಸಿ ಮಾಡೂದು ಬ್ಯಾಡ, ಆಯ್ತಾ?' ಅಂತೆಲ್ಲ ಸರ್ವೇಯರ್ ಪಳತ್ತಾಯ ಸಮಾಧಾನ ಮಾಡಿದರೂ ಹಿರಿಯಣ್ಣನ ಮೋರೆಯಲ್ಲಿ ಮಂದಹಾಸ ಮೂಡಲೇ ಇಲ್ಲ. ಹೆಂಡತಿ, ಮೂರು ಮಕ್ಕಳು, ಬಂದಿದ್ದು ತಿಂದುಂಡು ಹೋಗುವ ನೆಂಟರಿಷ್ಟರು, ಕಾಯಿಲೆ–ಕಸಾಲೆ; ಹಬ್ಬ–ಹುಣ್ಣಿವೆ, ತಿಥಿ, ಉಪನಯನ, ಲಗ್ನ ಅಂತ ಬಾಳುಪೂರ್ತಿ ಕಷ್ಟಪಟ್ಟು ಕೂಡಿಟ್ಟ ಮೂರುಕಾಸು ಕಂಡೂ ಕಾಣದಂತೆ ಮಾಯವಾಗಿತ್ತು.